# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು

**ಸಿ ಸಿ ನಂ. 137/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮೋಹನ್ ಡಿ.ಪಟೇಲ್ | ಚಾ ಸಾ -22 |
| ತಂದೆಯ ಹೆಸರು | - | ದೊಡ್ಡೇಗೌಡ | ಪ್ರಾ ಸಾ -10 |
| ವಯಸ್ಸು | - | 40 ವರ್ಷ | |
| ಉದ್ಯೋಗ | - | ಪಿಐ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 26.02.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:**

ನಾನು 2018 ರಿಂದ 2020 ಅಕ್ಟೋಬರ್ ರವರೆಗೂ ಮದ್ದೂರು ಸಂಚಾರಿ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.22.10.2018 ರಂದು ಕಡತವನ್ನು ಚಾಸಾ-21 ರವರಿಂದ ಪಡೆದು ತನಿಖೆ ಮುಂದುವರೆಸಿ, ಚಾಸಾ-6 ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.11.10.2018 ರಂದು ಅಮೃತ್ ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.18.11.2018 ರಂದು ನಗ್ಮಾಬಾನು ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.19.09.2018 ರಂದು ಎಂವಿ ವರದಿ ಸ್ವೀಕರಿಸಿಕೊಂಡಿರುತ್ತೇನೆ.

ದಿ.30.03.2019 ರಂದು ಚಾಸಾ-8 ಮತ್ತು 9 ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.06.05.2019 ರಂದು ಚಾಸಾ-5 ಮತ್ತು 10 ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.12.07.2019 ರಂದು ಚಾಸಾ-1 ರಿಂದ 3 ಮತ್ತು 7 ಹಾಗೂ ಪಂಡಿ

ವರುಣ್ ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ದಿ.30.03.2019 ರಂದು ಜಹೀರ್ ಅಹಮದ್ ರವರ ಗಾಯದ ಪ್ರಮಾಣ ಪತ್ರ ಮತ್ತು ಅಪಘಾತ ವಹಿಯನ್ನು ಸ್ವೀಕರಿಸಿಕೊಂಡಿರುತ್ತೇನೆ.

ಆರೋಪಿಯ ವಿರುದ್ದ ಆರೋಪಿ ಸಾಭೀತಾದ ಕಾರಣ ಅಂತಿಮ ವರದಿ ಸಲ್ಲಿಸಿರುತ್ತೆನೆ.

13 ಗಾಯದ ಪ್ರಮಾಣ ಪತ್ರಗಳನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು ನಿಪಿ-7 ರಿಂದ 19 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7 ಎ ರಿಂದ 19 ಎ ಎಂದು ಗುರುತಿಸಲಾಯಿತು.

13 ಅಪಘಾತ ವಹಿಗಳನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು ನಿಪಿ-20 ರಿಂದ 32 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-20 ಎ ರಿಂದ 32 ಎ ಎಂದು ಗುರುತಿಸಲಾಯಿತು.

ಎಂವಿ ವರದಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅದನ್ನು ನಿಪಿ-33 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-33 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರ ಮಾನ್ಯ ಶ್ರೀ.ಎಂಎಂಎಂ ವಕೀಲರಿಂದಃ**

ನಿಪಿ-7 ರಿಂದ 33 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗದೇ ಇದ್ದರೂ ಸಹ ಗಾಯಾಳುಗಳಿಗೆ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ಯಾವುದೇ ತನಿಖೆ ಮಾಡದೇ ಆರೋಪಿಯ ವಿರುದ್ದ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ